ಎರಡು ತಿಂಗಳಿಂದಲೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಹೋಗಲಿ ಬಿಡಿ, ಇಲ್ಲಿ ಯಾರು ತಾನೇ ಶಾಶ್ವತ. ಹಾಗೆ ನೋಡಿದರೆ ಇಪ್ಪತ್ತಮೂರು ವರ್ಷಗಳ ಹಿಂದೆ ಗದ್ದರ್‌ನಿಂದ ನಾನು ಅಥವಾ ನನ್ನಿಂದ ಗದ್ದರ್ ಸಾಯಬೇಕಿತ್ತು. ಜಗತ್ತಿನಲ್ಲಿ ಪ್ರತಿಯೊಬ್ಬರಿಗೂ ಅವರವರ ನಂಬಿಕೆಯೇ ಮುಖ್ಯವಾಗುತ್ತದೆ. ಗದ್ದರ್‌ಗೆ ತಾನು ತುಳಿಯುತ್ತಿರುವ ದಾರಿಯೇ ನ್ಯಾಯ ಅನ್ನಿಸಿತ್ತು. ಇತ್ತೀಚೆಗೆ ಅವರ ವಿಚಾರಗಳಲ್ಲಿ ತುಂಬಾ ಬದಲಾವಣೆಯಾಗಿತ್ತು' ರಂಗರಾವ್ ಸೌಮ್ಯವಾಗಿ ಮಾತನಾಡಿದ್ದರು. 'ನಾಳೆ ಎರಡೂ ಜೈಲುಗಳಲ್ಲೂ ಸಿಹಿ ಮತ್ತು ನಾನ್ ವೆಜ್ ಊಟ ಮಾಡಿಸೋಣ ಅಂತ ಸರ್..' ತೋಮಲಪಲ್ಲಿ ರಾಮರಾಜು ಮಾತುಗಳನ್ನು ಮಧ್ಯದಲ್ಲಿಯೇ ತುಂಡರಿಸುತ್ತಾ ರಂಗರಾವ್ 'ವೈಯಕ್ತಿಕ ದ್ವೇಷ ಸಾರ್ವಜನಿಕವಾಗಬಾರದು ರಾಮರಾಜು. ಹಾಗೆ ನೋಡಿದರೆ ಗದ್ದರ್ ಈ ನಾಡಿನ ಲಕ್ಷಾಂತರ ಜನರ ಆರಾಧ್ಯ ದೈವವಾಗಿ ಮೆರೆದವರು. ಯಾವುದೋ ಒಂದು ನಿರ್ದಿಷ್ಟ ಗುರಿಗಾಗಿ ವೈಯಕ್ತಿಕ ಬದುಕನ್ನು ತ್ಯಾಗ ಮಾಡಿದವರು. ಜೀವಂತ ಗುಂಡನ್ನು ಭುಜದಲ್ಲಿಟ್ಟುಕೊಂಡು ಹಸಿದು, ನಿದ್ದೆಗೆಟ್ಟು ಕಾಡು ಮೇಡುಗಳನ್ನು ಅಲೆದವರು. ಅವರು ಮನಸ್ಸು ಮಾಡಿದ್ದರೆ ಈ ನಾಡಿನ ಒಬ್ಬ ಮಂತ್ರಿಯೇ ಆಗಬಹುದಿತ್ತು. ಗದ್ದರ್‌ನಲ್ಲಿದ್ದ ಬದ್ಧತೆ ಮತ್ತು ನಿರಾಕರಣ ಶಕ್ತಿ ಅಗಾಧವಾದದ್ದು, ಅಸಾಧಾರಣವಾದದ್ದು. ಕೈದಿಗಳಿಗೆ ಒಳ್ಳೆಯ ಊಟ ಕೊಡುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಗದ್ದರ್ ಸಾವನ್ನು ಸಂಭ್ರಮಿಸುವುದರಲ್ಲಿ ಅರ್ಥವೂ ಇಲ್ಲ, ನನಗದು ಇಷ್ಟವೂ ಇಲ್ಲ' ರಂಗರಾವ್ ಯಾವೊತ್ತೂ ತಮ್ಮ ಅಭಿಪ್ರಾಯವನ್ನು ಯಾರ ಮುಂದಾದರೂ ನಿರ್ಭೀಡೆಯಿಂದ ನಿಖರವಾಗಿ ವ್ಯಕ್ತಪಡಿಸುವ ಜಾಯಮಾನದವರೇ ಆಗಿದ್ದರು. ರಾಮರಾಜು 'ಸಾರಿ ಸರ್, ನಾನು ಆವೇಶದಲ್ಲಿ ಮಾತನಾಡಿದ್ದನ್ನು ನೀವು ಸೀರಿಯಸ್ಸಾಗಿ ತೆಗೆದುಕೊಳ್ಳಬೇಡಿ. ಗುಡ್ ನೈಟ್ ಸರ್' ಎಂದು ಸೆಲ್ಯೂಟ್ ಹೊಡೆದು ನಡೆದಿದ್ದರು.

ಊಟ ಮುಗಿಸಿದ ರಂಗರಾವ್ ಭೀಮರಾಜುಗೆ ಊಟ ಮಾಡಿ ಮಲಗಲು ಹೇಳಿದ್ದರು. ನಲ್ಲಮಲ್ಲ ಫಾರೆಸ್ಟ್‌ನಲ್ಲಿ ನಡೆದ ಇಪ್ಪತ್ತಮೂರು ವರ್ಷಗಳ ಹಿಂದಿನ ಘಟನೆ ನೆನೆದು ಮೈ ಜುಂ ಎಂದಿತ್ತು. ಅಂದು ನಕ್ಸಲರು ಇರುವ ಸುಳಿವು ದೊರೆತು ಹತ್ತು ಮಂದಿ ಪೊಲೀಸ್ ಸಿಬ್ಬಂದಿಯೊಂದಿಗೆ ರಂಗರಾವ್ ನಲ್ಲಮಲ್ಲ ಫಾರೆಸ್ಟ್ ಏರಿಯಾ ಪ್ರವೇಶಿಸಿದ್ದರು. ಪೊಲೀಸ್ ಜೀಪುಗಳನ್ನು ನೇರ ರಸ್ತೆಯಲ್ಲಿ ಬರಲು ಹೇಳಿ ತಾವು ಇನ್ನೊಂದು ರಸ್ತೆಯಲ್ಲಿ ಸಾಗಿದ್ದರು. ಅದೇ ರಸ್ತೆಯಲ್ಲಿ ಗದ್ದರ್ ಕೂಡಾ ಶಸ್ತ್ರಸಜ್ಜಿತರಾಗಿ ಎದುರು ಬಂದಿದ್ದರು. ರಂಗರಾವ್ ಸಾಗಿದ ದಾರಿ ಸುಮಾರು ಮೂರು ಫರ್ಲಾಂಗ್ ದಟ್ಟವಾದ ಪೊದೆಗಳಿಂದ ಎರಡು ಭಾಗಗಳಾಗಿ ಸೀಳಿದ್ದರಿಂದ ರಂಗರಾವ್, ಗದ್ದರ್ ಎದುರು ಬದುರಾಗಿ ಹೋಗಿದ್ದರೂ ಒಬ್ಬರಿಗೊಬ್ಬರಿಗೆ ಕಂಡಿರಲಿಲ್ಲ. ಆದರೂ ಅಂದು ನೆಲ ಬಾಂಬ್ ಸ್ಫೋಟವಾಗಿ ನಾಲ್ಕು ಮಂದಿ ಪೊಲೀಸರು ಸತ್ತಿದ್ದರೆ, ಪೊಲೀಸರ ಗುಂಡಿಗೆ ಎಂಟು ಜನ ನಕ್ಸಲರು ಬಲಿಯಾಗಿದ್ದರು. ಗದ್ದರ್ ತಪ್ಪಿಸಿಕೊಂಡಿದ್ದರು.

ನಿಟ್ಟುಸಿರಿನೊಂದಿಗೆ ತಮ್ಮ ಎಡಗೈ ನೋಡಿಕೊಂಡಿದ್ದರು ರಂಗರಾವ್. ಮೊಣಕೈನಿಂದ ಬೆರಳುಗಳವರೆಗೂ ಕೃತಕವಾದ ಕೈ. ಪೊಲೀಸ್ ಡಿಪಾರ್ಟ್ಮೆಂಟ್ ಅಲ್ಲದೆ ಸಾರ್ವಜನಿಕವಾಗಿ ಆ ಕೃತಕ ಕೈ ರಂಗರಾವ್ ಅವರ ವರ್ಚಸ್ಸನ್ನು ಹೆಚ್ಚಿಸಿತ್ತಲ್ಲದೆ ಬೇಗ ಪ್ರಮೋಶನ್‌ನ್ನೂ ಗಳಿಸಿಕೊಟ್ಟಿತ್ತು. ನಕ್ಸಲ್ ಎನ್‌ಕೌಂಟರ್‌ನಲ್ಲಿ ರಂಗರಾವ್ ಕೈ ಕಳೆದುಕೊಂಡಿದ್ದಾರೆಂದೇ ಸುದ್ದಿಯಾಗಿತ್ತು. ಆದರೆ...? ಕ್ಷಣ ಬೆಚ್ಚಿಬಿದ್ದಿದ್ದರು ರಂಗರಾವ್. ಟೆರರ್ ಎಂದೇ ಹೆಸರಾಗಿದ್ದ ರಂಗರಾವ್ ಆಗ ಶ್ರೀಕಾಕುಳಂ ಜಿಲ್ಲೆಯ ಆ್ಯಂಟಿ ನಕ್ಸಲ್ ಸ್ಕ್ವಾಡ್‌ನ ಹೆಡ್ ಆಗಿ ಮತ್ತು ಅಸಿಸ್ಟೆಂಟ್ ಕಮಿಷನರ್ ಆಫ್ ಪೊಲೀಸ್ ಆಗಿ ಕೆಲಸ ಮಾಡುತ್ತಿದ್ದರು. ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ನಕ್ಸಲರ ಮೇಲೆ ಅಭಿಮಾನ ಮತ್ತು ಅನುಕಂಪ ಎರಡೂ ಇದ್ದವು. ಹಾಗಾಗಿ ಅನೇಕರು ನಕ್ಸಲರಿಗೆ ಮಾಹಿತಿದಾರರಾಗಿ ಕೆಲಸ ಮಾಡುತ್ತಿದ್ದರು. ಪೊಲೀಸರು ಅಂಥವರನ್ನೂ ಒಮ್ಮೊಮ್ಮೆ ಬಂಧಿಸಿ ವಿಚಾರಣೆ ನಡೆಸುತ್ತಿದ್ದರು. ಆಗ ಜಿಲ್ಲೆಯ ಎಸ್ಪಿ ಆಗಿದ್ದವರು ಯರ್ರಗುಂಟ ಸಾಂಬಶಿವಾರೆಡ್ಡಿ ಇನ್ ಶಾರ್ಟ್ ಕಟ್ ವೈ.ಎಸ್. ರೆಡ್ಡಿ. ಎಸ್ಪಿ ರೆಡ್ಡಿಯೆಂದರೆ ಜಿಲ್ಲೆಯಲ್ಲಿ ನಕ್ಸಲರೇ ಅಲ್ಲದೆ ಸಾಮಾನ್ಯ ಜನರು ಕೂಡಾ ತುಂಬಾನೇ ಭಯ ಪಡುತ್ತಿದ್ದರು. ಮಾತೆತ್ತಿದರೆ ಲಾಠಿಯನ್ನು ಪ್ರಯೋಗಿಸುತ್ತಿದ್ದರು. ಕೆಲವೊಮ್ಮೆ ಎಸಿಪಿ ರಂಗರಾವ್ ಮತ್ತು ಎಸ್ಪಿ ರೆಡ್ಡಿ ಜಂಟಿ